ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ತಂಡುಭೂಮಿ ಬಗ್ಗೆ

೩೧೪. ಶ್ರೀ ಅಂಜನಮೂರ್ತಿ (ನೆಲಮಂಗಲ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ರಾಜ್ಯದಲ್ಲಿ ತಂಡು ಭೂಮಿ ಕಾಯಿದೆಯಿಂದ ಬಡಜನತೆಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಸದರಿ ತೊಂದರೆ ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

(ಅ) ಹೌದು

(ಆ) ತಂಡು ಭೂಮಿ ಕಾಯಿದೆಯನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಬರಗಾಲ ಕಾಮಗಾರಿಗಳಿಗಾಗಿ ಖರ್ಚುಮಾಡಿದ ಹಣ

ಶ್ರೀ ಶಿವಾನಂದ ಪಾಟೀಲ್. ಕೌಜಲಗಿ (ಬೈಲಹೊಂಗಲ).—

೨೪೩. ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಬೆಳಗಾವಿ ಜಿಲ್ಲೆಗೆ ಬರಗಾಲ ಕಾಮಗಾರಿಗಳ ಪರಿಹಾರ ಕಾರ್ಯಗಳಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ?

(ಆ) ಹಾಗಿದ್ದಲ್ಲಿ ಸದರಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗಿದೆ ಹಾಗೂ ಯಾವ ಯಾವ ಬಾಬುಗಳಿಗೆ ಬಿಡುಗಡೆ ಮಾಡಲಾಗಿದೆ ?

(ಇ) ಸದರಿ ಕಾಮಗಾರಿ ಪರಿಹಾರ ಕಾರ್ಯಗಳಿಗಾಗಿ ದಿನಾಂಕ. ೧೫-೧೦-೧೯೯೦ರ ವರೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ?

(ಈ) ಹಾಗಿದ್ದಲ್ಲಿ ಯಾವ ಯಾವ ಬರಗಾಲ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ (ಕೆಲಸದ ಸ್ಥಳ ಗ್ರಾಮಗಳ ಹೆಸರು ಪೂರ್ಣ ವಿವರ ನೀಡುವುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

			(ಲಕ್ಷ ರೂ. ಗಳಲ್ಲಿ)
ಅ)	ಅ) ಕುಡಿಯುವ ನೀರು ಪೂರೈಕೆ		೨೯.೦೦
	ಆ) ಉದ್ಯೋಗ ಸೃಜನೆ		೧೦.೦೦
		ದಿನಾಂಕ	
ಆ)	ಅ) ಕುಡಿಯುವ ನೀರಿನ ಪೂರೈಕೆ	೨೪-೪-೧೯೯೦	೧೫.೦೦
		೧೪-೫-೧೯೯೦	೪.೦೦
		೯-೧೦-೧೯೯೦	೧೦.೦೦
	ಆ) ಉದ್ಯೋಗ ಸೃಜನೆ	೯-೧೦-೧೯೯೦	೧೦.೦೦

ಇ) ಕುಡಿಯುವ ನೀರಿನ ಪ್ರಾತಾರ್ಪೈಕೆ—೪.೯೦ ಲಕ್ಷ ರೂ.

ಈ) ಜಿಲ್ಲಾ ಪರಿಷತ್ತು ಪತಿಯಿಂದ ಅನೇಕ ಯೋಜನೆಗಳಡಿಯಲ್ಲಿ ಕಾಮಗಾರಿಗಳನ್ನು ಕೈಗೊಂಡಿದೆ. ಅವಶ್ಯವೆನಿಸುವ ಪ್ರದೇಶಗಳಲ್ಲಿ ಅಥವಾ ಪರಿಹಾರದಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.